# ಪುಣ್ಯಕ್ಷೇತ್ರ ಪಂಢರಾಪುರ

**ಸ್ವಾಮಿ ಅಘಹರಾನಂದ**

ಮಹಾರಾಷ್ಟ್ರ ರಾಜ್ಯದ ಮೂಲೆಮೂಲೆಗಳಲ್ಲೂ ತೀರ್ಥಕ್ಷೇತ್ರಗಳಿರುವುದು ಲೋಕವಿದಿತವಾದ ಸಂಗತಿಯಾಗಿದೆ. ಅವುಗಳಲ್ಲಿ ಪಂಢರಾಪುರದ ವಿಠ್ಠಲನ ಕ್ಷೇತ್ರವು ಅನೇಕ ಮಂದಿ ಸಾಧುಸಂತರಿಗೆ ಸ್ಫೂರ್ತಿಯ ಕೇಂದ್ರವಾಗಿತ್ತು. 'ಕಾನಡೀ ವಿಠ್ಠಲ'ನು ಕನ್ನಡಿಗನಾದ ದೇವರೆಂಬುದು ನಮಗೆಲ್ಲ ಹೆಮ್ಮೆಯ ವಿಚಾರ. ಈ ಕ್ಷೇತ್ರವನ್ನು ಕುರಿತು, ಹಾಗೂ ಇಲ್ಲಿಗೆ ಸಂಬಂಧಪಟ್ಟ ಕೆಲವು ಮಂದಿ ಪ್ರಮುಖ ಸಂತರ ಬಗ್ಗೆ ಇಲ್ಲಿ ಬರೆದಿರುವ ಲೇಖಕರು ಮೈಸೂರು ಶ್ರೀರಾಮಕೃಷ್ಣ ವಿದ್ಯಾಶಾಲೆಯಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ.

ತೀರ್ಥಕ್ಷೇತ್ರಗಳಲ್ಲಿ ಋಷಿಮುನಿಗಳು ದೀರ್ಘಕಾಲ ತಪಶ್ಚರ್ಯೆಗೈದಿರುವುದರಿಂದ ಹಾಗೂ ಕಾಲಕಾಲಕ್ಕೆ ಉದಿಸಿದ ಸಿದ್ಧರೂ, ಸಾಧು-ಸಂತರೂ ಅಲ್ಲಿಗೆ ಆಗಮಿಸಿ ತಮ್ಮ ಮಹೋನ್ನತ ಆಧ್ಯಾತ್ಮಿಕ ಶಕ್ತಿಯನ್ನು ಸಿಂಪಡಿಸಿರುವುದರಿಂದ ಅಲ್ಲಿ ದೈವೀಭಾವಗಳು ಘನೀಭೂತವಾದಂತಿರುತ್ತವೆ. ಆದ್ದರಿಂದ ಆ ಸ್ಥಳಗಳಿಗೆ ಭೇಟಿಯಿತ್ತ ಯಾತ್ರಿಕರಲ್ಲೂ ಆ ಭಾವಗಳು ಸುಲಭವಾಗಿ ಉದ್ದೀಪನಗೊಳ್ಳುತ್ತವೆ ಎಂಬುದು ಶ್ರೀರಾಮಕೃಷ್ಣರು ಪದೇ ಪದೇ ಹೇಳುತ್ತಿದ್ದ ಮಾತು. ಅವರು ಹೇಳುತ್ತಾರೆ: ''ಯಾರ ಅಂತರ್ಯದಲ್ಲಿ ಭಕ್ತಿಭಾವವಿದೆಯೋ, ಅವನಿಗೆ ಪುಣ್ಯಕ್ಷೇತ್ರಗಳಲ್ಲಿ ಅದು ಉದ್ದೀಪನಗೊಂಡು ಮತ್ತಷ್ಟು ಹೆಚ್ಚುತ್ತದೆ'' ಎಂದು. ಇಂತಹ ಒಂದು ಪುಣ್ಯಕ್ಷೇತ್ರವಾದ ಪಂಢರಾಪುರದ ಸ್ಥಳ ಮಹಿಮೆಯನ್ನು ಅರಿಯುವ ಪ್ರಯತ್ನ ಮಾಡೋಣ.



## ಪಂಢರಾಪುರ

ಪಂಢರಾಪುರವು ಮಹಾರಾಷ್ಟ್ರದ ಸೋಲಾಪುರ ಜಿಲ್ಲೆಯಲ್ಲಿದೆ. ಇದು ಪರಮಪಾವನಕರ ಕಲ್ಯಾಣಮೂರ್ತಿ ಶ್ರೀಪಾಂಡುರಂಗನ ಆಲಯವಿರುವ ತಾಣ. ಮಹಾವಿಷ್ಣುವಿಗೆ ಶತಕೋಟಿ ನಾಮಗಳು. ಎಲ್ಲಾ ನದಿಗಳು ಎಲ್ಲೋ ಹುಟ್ಟಿ ಕಟ್ಟಕಡೆಗೆ ಸಾಗರವನ್ನೇ ಸೇರುವಂತೆ, ಯಾವ ಹೆಸರಿನಲ್ಲಿ ಪೂಜಿಸಿದರೂ ವಿಶ್ವರೂಪಿಯಾದ ಆ ಮಹಾವಿಷ್ಣುವಿಗೇ ಸಲ್ಲುತ್ತದೆ. ಮಹಾವಿಷ್ಣುವು ತನ್ನ ಭಕ್ತನಾದ ಪುಂಡಲೀಕನಿಗೆ ದರ್ಶನ ಕೊಡಲೆಂದು ವೈಕುಂಠದಿಂದ ಭೂಲೋಕಕ್ಕೆ ಧಾವಿಸಿ ಬಂದು ಇಟ್ಟಿಗೆಯ ಮೇಲೆ ನಿಂತ ಸ್ಥಳವೇ ಈ ಪಂಢರಾಪುರ ಮಹಾಕ್ಷೇತ್ರ. ಇಟ್ಟಿಗೆಯ ಮೇಲೆ ನಿಂತುದಕ್ಕಾಗಿ ಆತನಿಗೆ ವಿಠೋಬಾ ಅಥವಾ ವಿಠ್ಠಲ ಎಂಬ ಹೆಸರು ಬಂದಿದೆ.

ಇತಿಹಾಸಕಾರರ ಪ್ರಕಾರ ವಿಠ್ಠಲ ಕರ್ನಾಟಕದವನು. ಸಂತ ನಾಮದೇವರು ತಮ್ಮ ಅಭಂಗದಲ್ಲಿ ''ಕಾನಡಾ ವಿಠ್ಠಲ ಭೀಮಾ ನದಿಯ ದಡದಲ್ಲಿ ನಿಂತಿದ್ದಾನೆ. ಕಾನಡಾನ ದರ್ಶನ ಮಂಗಳಕರ, ಆತನ ಹೆಸರು ಮಧುರ ಹಾಗೂ ಆತನ ರೂಪ ಆಹ್ಲಾದಕರ'' ಎಂದು ಬರೆದಿದ್ದಾರೆ. ಇನ್ನು ಕೆಲವು ಇತಿಹಾಸಕಾರರ ಪ್ರಕಾರ ಹೊಯ್ಸಳ ದೊರೆಯಾದ ವಿಷ್ಣುವರ್ಧನನ (೧೧೧೭-೧೧೩೭) ತರುವಾಯ, ಮತ್ತೊಬ್ಬ ಹೊಯ್ಸಳ ರಾಜ ವಿಠ್ಠಲನನ್ನು ಕರ್ನಾಟಕದಿಂದ ಪಂಢರಾಪುರಕ್ಕೆ ಕರೆತಂದ ಎನ್ನಲಾಗುತ್ತದೆ.

ಭಗೀರಥನು ಗಂಗೆಯನ್ನು ಭೂಲೋಕಕ್ಕೆ ತಂದಾಗ ಅದರಲ್ಲಿ ಅನೇಕ ಶಾಖೆಗಳು ಉದ್ಭವಿಸಿದವು. ಅವುಗಳಲ್ಲಿ ಒಂದು ಚಂದ್ರಭಾಗಾ ನದಿ. ಪರಮ ಪವಿತ್ರವಾದ ಈ ಚಂದ್ರಭಾಗಾ ನದಿಯಲ್ಲಿ ಸ್ನಾನ ಮಾಡಿ, ಪುಂಡಲೀಕನ ಮಂದಿರಕ್ಕೆ ತೆರಳಿ, ನಂತರ ಪಾಂಡುರಂಗನ ದರ್ಶನಕ್ಕೆ ತೆರಳುವುದು ಇಲ್ಲಿನ ವಾಡಿಕೆ. ಮಹಾವಿಷ್ಣುವು ಕುದುರೆಯೇರಿ ಈ ಪುಣ್ಯಕ್ಷೇತ್ರಕ್ಕೆ ಬಂದನೆಂದು ಪ್ರತೀತಿ. ಆ ಕುದುರೆಯ ಸಂತತಿಯೇ ಇಂದಿಗೂ ಬ್ರಹ್ಮೋತ್ಸವದ ಮುಂಚೆ ಪೂಜೆಗೊಳ್ಳುತ್ತದೆ. ಬ್ರಹ್ಮೋತ್ಸವದಂದು ಪಾಂಡುರಂಗನನ್ನು ಮನೋಹರವಾದ ರಥದಲ್ಲಿ ಕುಳ್ಳಿರಿಸಿ ಮೆರವಣಿಗೆ ಮಾಡಲಾಗುತ್ತದೆ.

ಭಕ್ತರು ದೇವರನ್ನು ಅರಸಿದಂತೆ, ಆ ದೇವರೇ ಭಕ್ತರನ್ನು ಹುಡುಕುತ್ತ ಬರುವನೆಂಬುದಕ್ಕೆ ಈ ಕ್ಷೇತ್ರವೇ ಸಾಕ್ಷಿ. ವಿಷ್ಣುವು ವಿಠ್ಠಲನಾಗಿ ನೆಲೆಸಿದುದೇ ಪುಂಡಲೀಕನ ಕಾರಣದಿಂದಾಗಿ. ಹಾಗಾಗಿ ಇಲ್ಲಿ ಮೊದಲು ಪುಂಡಲೀಕನ ದರ್ಶನ. ನಂತರ ವಿಠ್ಠಲನ ದರ್ಶನ. ಪುಂಡಲೀಕ ಭಕ್ತನ ಮಂದಿರವು ನದಿಯ ತಟದಲ್ಲಿಯೇ ಇದೆ.

## ಪುಂಡಲೀಕ

ಬ್ರಾಹ್ಮಣ ಕುಟುಂಬದಲ್ಲಿ ಜನಿಸಿದ್ದರೂ ಪುಂಡಲೀಕನು ಕುಸಂಸ್ಕಾರಗಳಿಗೆ ಬಲಿಯಾಗಿದ್ದನು. ಸ್ತ್ರೀವ್ಯಾಮೋಹ ಹಾಗೂ ದುಶ್ಚಟಗಳಿಗೆ ವಶನಾಗಿದ್ದ ಆತನು ತನ್ನ ಮಾತಾಪಿತರನ್ನು ಕಡೆಗಣಿಸಿ, ಅವರನ್ನು ಮನೆಯಿಂದ ಹೊರಹಾಕಿದ್ದನು. ಆದರೆ ದೈವ ಸಂಕಲ್ಪದಿಂದಲೋ ಅಥವಾ ಪೂರ್ವಜನ್ಮದ ಸುಕೃತದಿಂದಲೋ ಪುಂಡಲೀಕನ ಮನಸ್ಸಿನಲ್ಲಿ ಕಾಶಿಗೆ ತೆರಳಬೇಕೆಂಬ ಇಚ್ಛೆ ಉಂಟಾಯಿತು. ಆಗ ಆತನು ಪತ್ನಿ ಸಮೇತನಾಗಿ ಕಾಶಿಯಾತ್ರೆ ಕೈಗೊಂಡನು. ಮಾರ್ಗದಲ್ಲಿ ಪಥಭ್ರಷ್ಟನಾಗಿ ತೊಂದರೆಗೆ ಸಿಕ್ಕಿಹಾಕಿಕೊಂಡನು. ಸಂಜೆಗತ್ತಲು ಆವರಿಸುತ್ತಿದ್ದುದರಿಂದ ದಂಪತಿಗಳು ಕುಕ್ಕುಟ ಎಂಬ ಋಷಿಯ ಆಶ್ರಮದಲ್ಲಿ ತಂಗಲು ನಿರ್ಧರಿಸಿದರು. ಕುಕ್ಕುಟ ಋಷಿಯು ಈ ದಂಪತಿ

ಗಳನ್ನು ಸ್ವಾಗತಿಸಿ, ಭೋಜನಕ್ಕಿತ್ತು ವಿಶ್ರಮಿಸಲು ಅನುಕೂಲ ಕಲ್ಪಿಸಿದನು.

ಮಧ್ಯರಾತ್ರಿಯಲ್ಲಿ ಪುಂಡಲೀಕನು ಕೆಲವಾರು ಧ್ವನಿಗಳು ಕೇಳಿದುದರಿಂದ ಎಚ್ಚರಗೊಂಡನು. ಆಗ ಆತನು ಋಷಿಯ ಆಶ್ರಮದ ಜಗುಲಿಯನ್ನು ಮೂವರು ಸ್ತ್ರೀಯರು ಶುಚಿಗೊಳಿಸುತ್ತಿರುವುದನ್ನು ಕಂಡನು. ''ಈ ಅಪರಾತ್ರಿಯಲ್ಲಿ ಈ ಸ್ತ್ರೀಯರು ಏಕೆ ಜಗುಲಿಯನ್ನು ಶುಚಿಗೊಳಿಸುತ್ತಿದ್ದಾರೆ?'' ಎಂದು ಆತನು ಚಕಿತನಾದನು. ಶುಚಿಗೊಳಿಸುತ್ತ ಆ ಸ್ತ್ರೀಯರು ಮೊದಮೊದಲು ವೃದ್ಧರಾಗಿದ್ದವರು, ಬರುಬರುತ್ತ ಅತ್ಯಂತ ಸೌಂದರ್ಯಭರಿತ ಹಾಗೂ ಲಾವಣ್ಯವತಿಯರಾಗುತ್ತಿರುವುದನ್ನು ಕಂಡು ಅವನು ಅವಾಕ್ಕಾದನು. ಜಗುಲಿಯನ್ನು ಸಂಪೂರ್ಣವಾಗಿ ಶುಚಿಗೊಳಿಸುತ್ತಲೇ ಆ ಸ್ತ್ರೀಯರು ದೇವತಾಸ್ವರೂಪರಾಗಿದ್ದರು. ''ನೀವುಗಳು ಯಾರು?'' ಎಂದು ಪುಂಡಲೀಕನು ಅವರನ್ನು ಪ್ರಶ್ನಿಸಿದನು. ಅವರು ''ನಾವು ಗಂಗಾ, ಯಮುನಾ ಹಾಗೂ ಸರಸ್ವತಿಯರು. ಬಹಳಷ್ಟು ಪಾಪಿಜನರು ನಮ್ಮಲ್ಲಿ ಬಂದು ತಮ್ಮ ಪಾಪವನ್ನು ಕಳೆದುಕೊಳ್ಳುತ್ತಾರೆ. ನಮ್ಮನ್ನು ನಾವು ಪವಿತ್ರರನ್ನಾಗಿಸಲು ನಾವು ಈ ಋಷಿಯ ಜಗುಲಿಯನ್ನು ಶುಚಿಗೊಳಿಸುತ್ತೇವೆ. ನೀನೂ ಕೂಡ ಪರಮ ಪಾಪಿಯಾಗಿದ್ದೆ. ಆದರೆ ನಮ್ಮ ದರ್ಶನಲಾಭದಿಂದ ನೀನು ಪವಿತ್ರನಾಗಿದ್ದೀಯೆ'' ಎಂದು ಉತ್ತರಿಸಿದರು.

ಕುಕ್ಕುಟನಿಗೆ ಇಂತಹ ಸಾಮರ್ಥ್ಯ ಬರಲು ಕಾರಣವೇನು ಎಂದು ಪುಂಡಲೀಕನು ಅಚ್ಚರಿಗೊಂಡನು. ಆ ದೇವತೆಗಳು ನುಡಿದರು: ''ಆತನು ತನ್ನ ಪಾಲಕರಿಗೆ ಅತ್ಯಂತ ಪ್ರೀತಿ ಹಾಗೂ ಶ್ರದ್ಧೆಯಿಂದ ಸೇವೆ ಸಲ್ಲಿಸಿದ್ದಾನೆ. ಆದ್ದರಿಂದಲೇ ಆತನಿಗೆ ಈ ಸಾಮರ್ಥ್ಯ ದೊರಕಿದೆ''. ಆಗ ಪುಂಡಲೀಕನಿಗೆ ತನ್ನ ತಪ್ಪು ಮನವರಿಕೆಯಾಯಿತು. ತಕ್ಷಣ ಆತನು ಕಾಶೀಯಾತ್ರೆಯನ್ನು ಮೊಟಕುಗೊಳಿಸಿ, ಊರಿಗೆ ಹಿಂತಿರುಗಿ ತನ್ನ ಮಾತಾಪಿತರ ಸೇವೆಗೆ ತೊಡಗಿದನು. ತದನಂತರ ಅವರನ್ನು ಅತೀವ ಗೌರವದಿಂದ ತನ್ನ ಮನೆಗೆ ಕರೆದುಕೊಂಡುಬಂದನು. ಅಲ್ಲಿ ಅತೀವ ಶ್ರದ್ಧೆಯಿಂದ ಅವರ ಸೇವೆ ಮಾಡತೊಡಗಿದನು.

ಪುಂಡಲೀಕನ ನಿಷ್ಠೆಯಿಂದ ಸಂಪ್ರೀತನಾದ ವಿಷ್ಣುವು ಆತನನ್ನು ನೋಡಲೋಸುಗ ಆಗಮಿಸಿದನು. ಆಗ ಪುಂಡಲೀಕನು ತನ್ನ ತಂದೆ-ತಾಯಿಯರ ಪಾದಸೇವೆ ಮಾಡುತ್ತಿದ್ದನು. ಹೀಗಾಗಿ ಆತನಿಗೆ ಅನಿರೀಕ್ಷಿತವಾಗಿ ಆಗಮಿಸಿದ ಈ ಅತಿಥಿಯನ್ನು ಗಮನಿಸಲಾಗಲಿಲ್ಲ. ಭಗವಂತನ ಶರೀರದಿಂದ ಹೊರಹೊಮ್ಮಿದ ದಿವ್ಯಜ್ಯೋತಿಯಿಂದಾಗಿ ಅವನೆಡೆಗೆ ಆತನ ಗಮನ ಹರಿಯಿತು. ತನ್ನ ಪಾಲಕರ ಸೇವೆಯಲ್ಲಿ ಚ್ಯುತಿಯುಂಟಾಗುವುದು ಆತನಿಗೆ ಇಷ್ಟವಿರಲಿಲ್ಲ. ಹಾಗೆಯೇ ಅತಿಥಿಯಾಗಿ ಆಗಮಿಸಿದ ಭಗವಂತನನ್ನೂ ಸತ್ಕರಿಸಬೇಕಾಗಿದೆ. ಆಗ ಆತನು ಅಲ್ಲಿಯೇ ಪಕ್ಕದಲ್ಲಿದ್ದ ಒಂದು ಇಟ್ಟಿಗೆಯನ್ನು ಕಂಡನು. ಅದನ್ನು ಭಗವಂತನತ್ತ ಎಸೆದು, ಭಗವಂತನು ಅದನ್ನು ಆಸನವಾಗಿ ಪರಿಗಣಿಸಬೇಕೆಂದು ಕೇಳಿಕೊಂಡನು. ಸಂತೋಷದಿಂದ ವಿಷ್ಣುವು ತನ್ನ ಸೊಂಟದ ಮೇಲೆ ಕೈಯಿರಿಸಿಕೊಂಡು ಆ ಇಟ್ಟಿಗೆಯ ಮೇಲೆ ನಿಂತನು. ಪಾಲಕರಿಗೆ ನಿದ್ರೆ ಆವರಿಸಿದೊಡನೆ ಆತನು ಭಗವಂತನನ್ನು ಸ್ವಾಗತಿಸಲು ಧಾವಿಸಿದನು. ತಂದೆ-ತಾಯಿಯರ ಕುರಿತಾಗಿ ಆತನಿಗಿದ್ದ ಭಕ್ತಿಯಿಂದ ಸಂಪ್ರೀತನಾದ ಭಗವಂತನು ಏನಾದರೂ ವರ ಬೇಡುವಂತೆ ಕೇಳಿದನು. ಆಗ ಪುಂಡಲೀಕನು ಪರಮಾತ್ಮನನ್ನು ಅಲ್ಲಿಯೇ ಶಾಶ್ವತವಾಗಿ ನೆಲೆನಿಲ್ಲುವಂತೆ ಪ್ರಾರ್ಥಿಸಿದನು.

ಅದೇ ಇಂದು ಪಂಢರಾಪುರವಾಗಿದೆ. ಸೊಂಟದ ಮೇಲೆ ಕೈಯಿಟ್ಟು ನಿಂತ ವಿಠ್ಠಲನು ಭಕ್ತರ ಬರವಿಗಾಗಿ ಎದುರು ನೋಡುತ್ತಿರುವಂತಿದೆ. ನಾವು ಪಂಢರಾಪುರಕ್ಕೆ ಹೋದ ಸಂದರ್ಭದಲ್ಲಿ ಅಲ್ಲಿನ ಓರ್ವ ಭಕ್ತರು ಹೇಳಿದ ಮಾತು ಉಲ್ಲೇಖನೀಯ. ಅವರೆನ್ನುತ್ತಾರೆ, ''ವಿಠ್ಠಲನ ದೃಷ್ಟಿ ನೆಲದ ಮೇಲಿದೆ. ಆತ ತನ್ನ ದರ್ಶನಕ್ಕೆ ಬಂದವರ ಮುಖ ನೋಡುವುದಿಲ್ಲ. ಎಂದರೆ ಸ್ಥಾನ-ಮಾನ ನೋಡಿ ವ್ಯವಹರಿಸುವುದಿಲ್ಲ. ಬದಲಾಗಿ ಆತನ ದೃಷ್ಟಿ ಭಕ್ತರ ಪಾದಗಳ ಮೇಲಿದೆ. ಎಂದರೆ ಭಕ್ತರ ನಡತೆಯನ್ನು ಪರಿಗಣಿಸಿ ವ್ಯವಹರಿಸುತ್ತಾನೆ'' ಎಂದು. ಸಂಪೂರ್ಣ ಭಾರತಾದ್ಯಂತ ಬಹುಶಃ ಭಗವಂತನ ವಿಗ್ರಹದ ಪಾದಸ್ಪರ್ಶ ಮಾಡಲು ಅವಕಾಶವಿರುವ ಏಕೈಕ ಕ್ಷೇತ್ರ ಪಂಢರಾಪುರ. ಇದಕ್ಕೆ ಚಂದ್ರಭಾಗಾ ನದಿಯಿಂದ ಸಾಲು ಪ್ರಾರಂಭವಾಗುತ್ತದೆ. ಪಾದಸ್ಪರ್ಶ ಮಾಡಲು ಸುಮಾರು ೫-೬ ಗಂಟೆ ಸಮಯ ಬೇಕಾಗುತ್ತದೆ. ಆದರೆ ಆನಲೈನ್ ಟಿಕೆಟ್ ಪಡೆದರೆ (ಇದು ಉಚಿತ ಕೂಡ) ಕೇವಲ ೧-೨ಗಂಟೆಯಲ್ಲಿಯೇ ವಿಠ್ಠಲನ ಪಾದಸ್ಪರ್ಶ ಮಾಡಬಹುದು.

ಮುಖದರ್ಶನ ಮಾಡಲು ಯಾವುದೇ ತೊಂದರೆಯಿಲ್ಲ. ಇಲ್ಲಿನ ಬಹುತೇಕ ಜನ ಕೆಲಸ ಕಾರ್ಯಗಳಿಗೆ ತೆರಳುವ ಮುನ್ನ ಹಾಗೂ ರಾತ್ರಿ ಮನೆಗೆ ತೆರಳುವ ಮುನ್ನ ವಿಠ್ಠಲನ ಮುಖದರ್ಶನ ಮಾಡುವ ಪ್ರವೃತ್ತಿ ಇಟ್ಟುಕೊಂಡಿದ್ದಾರೆ. ವಿಠ್ಠಲ ಕೀರ್ತನಪ್ರಿಯ. ಹೀಗಾಗಿ ಪ್ರತಿದಿನ ದೇಗುಲದಲ್ಲಿ ನಾಮ ಸಂಕೀರ್ತನೆ ನಡೆಯುತ್ತಲೇ ಇರುತ್ತದೆ. ವಿಠ್ಠಲನ ವಿಗ್ರಹದ ಅನತಿ ದೂರದಲ್ಲಿ ರುಕ್ಮಿಣಿಯ ವಿಗ್ರಹವಿದೆ. ಆಕೆಯನ್ನು ನೋಡಿದರೆ, ನಕ್ಕು-ನಲಿದಾಡುತ್ತಿರುವ ಪುಟ್ಟ ಬಾಲಕಿಯನ್ನು ಕಂಡಂತಾಗುತ್ತದೆ.

ದೇವಸ್ಥಾನದ ಪ್ರವೇಶದ್ವಾರದ ಮೆಟ್ಟಿಲುಗಳ ಮೇಲೆ ಎರಡು ಪಾದಚಿಹ್ನೆಗಳಿವೆ. ಅದು ಸಂತ ನಾಮದೇವರ ಸಮಾಧಿ ಸ್ಥಳ. ''ನಾನು ಸದಾ ನಿನ್ನ ಭಕ್ತರ ಪಾದಧೂಳಿಯಿಂದ ಪವಿತ್ರನಾಗುತ್ತಿರಲಿ'' ಎಂದು ನಾಮದೇವರು ವಿಠ್ಠಲನಲ್ಲಿ ಪ್ರಾರ್ಥನೆ ಮಾಡಿದ್ದಾರೆ. ಈ ಕಾರಣದಿಂದಾಗಿ ನಾಮದೇವರ ಸಮಾಧಿಯ ಮೇಲೆ ಭಕ್ತರು ವಿಠ್ಠಲನ ದರ್ಶನಕ್ಕೆ ಹೋಗುವ ಮೆಟ್ಟಿಲು ನಿರ್ಮಿಸಿದ್ದಾರೆ.

### ಸಂತ ನಾಮದೇವ

ನಾಮದೇವ ಜನಿಸಿದ್ದು ೨೬ನೇ ಅಕ್ಟೋಬರ್ ೧೨೭೦ರ ಏಕಾದಶಿಯಂದು. ೫ ವರ್ಷದ ಬಾಲಕನಾಗಿದ್ದಾಗ ಈತ ವಿಠ್ಠಲನ ಮಂದಿರಕ್ಕೆ ಹಾಲನ್ನು ನೈವೇದ್ಯ ಮಾಡಲು ಹೋಗಿರುತ್ತಾನೆ. ಎಲ್ಲರಂತೆ ವಿಗ್ರಹದ ಮುಂದೆ ಹಾಲನ್ನು ಕೆಲಹೊತ್ತು ಇಟ್ಟು, ನಿವೇದನೆಯಾಯಿತು ಎಂದುಕೊಂಡು ಹಾಲನ್ನು ತೆಗೆದುಕೊಂಡು

ಬಾಲಕ ಹಿಂದಿರುಗುವುದಿಲ್ಲ. ಬದಲಾಗಿ ವಿಠ್ಠಲ ತಾನೇ ಬಂದು ಹಾಲನ್ನು ಕುಡಿಯುತ್ತಾನೆ ಎಂದೇ ಆತನು ಭಾವಿಸಿದ್ದ. ಹೀಗಾಗಿ ಎಷ್ಟು ಹೊತ್ತಾದರೂ ವಿಠ್ಠಲ ಪ್ರತ್ಯಕ್ಷನಾಗದಿದ್ದಾಗ ಬಾಲಕ ನಾಮದೇವ ಅಳಲು ಪ್ರಾರಂಭಿಸುತ್ತಾನೆ. ಹಾಲನ್ನು ಕುಡಿಯುವವರೆಗೆ ಗರ್ಭಗೃಹದಿಂದ ಹೊರಗೆ ಹೋಗುವುದಿಲ್ಲ ಎಂದು ಹಠ ಹಿಡಿಯುತ್ತಾನೆ. ಬಾಲಕನ ಸರಳ ಮುಗ್ಧ ಶ್ರದ್ಧೆಗೆ ಒಲಿದ ಭಗವಂತ ಆವಿರ್ಭವಿಸಿ ಹಾಲನ್ನು ಕುಡಿಯುತ್ತಾನೆ. ಹೀಗೆ ಬಾಲ್ಯದಿಂದಲೇ ಅತೀವ ಭಕ್ತಿಯಿಂದ ಕೂಡಿದ ವ್ಯಕ್ತಿ ನಾಮದೇವ.

ಬೆಳೆದು ದೊಡ್ಡವನಾದ ಮೇಲೆ ಆತ ಗೃಹಸ್ಥನಾಗುತ್ತಾನೆ. ಆತ ಸ್ವತಃ ವಿಠ್ಠಲನೊಂದಿಗೆ ಮಾತನಾಡಬಲ್ಲ ಯೋಗ್ಯತೆ ಹೊಂದಿದ್ದ. ಭಗವನ್ಮಯನಾಗಿದ್ದ ಆತ ಲೌಕಿಕ ವ್ಯವಹಾರಗಳನ್ನು ಕಡೆಗಣಿಸಿಬಿಟ್ಟಿದ್ದ. ಪರಿಣಾಮ ಬಡತನ. ಇಂತಹ ಪರಿಸ್ಥಿತಿಯಲ್ಲಿ ಸ್ವತಃ ವಿಠ್ಠಲನೇ ಈತನ ಮನೆಗೆ ಮಾರುವೇಷದಲ್ಲಿ ಬಂದು ಅಡುಗೆಗೆ ಬೇಕಾದ ಸಾಮಗ್ರಿಗಳನ್ನು ಖರೀದಿಸಲು ಹಣ ನೀಡುತ್ತಿದ್ದ. ನಾಮದೇವ ಆ ಹಣವನ್ನು ಸ್ವೀಕರಿಸದೆ ಬಡಬಗ್ಗರಿಗೆ ಹಂಚಿಬಿಡುತ್ತಿದ್ದ.

ಒಂದು ದಿನ ಭಕ್ತ ಕುಂಬಾರ (ಗೋರಾ)ನ ಮನೆಯಲ್ಲಿ ಸತ್ಸಂಗ ಏರ್ಪಟ್ಟಿತ್ತು. ಆಗ ಜ್ಞಾನದೇವರು ಗೋರಾನಿಗೆ , ''ನೀನು ಮಡಕೆಗಳನ್ನು ಕುಟ್ಟಿ, ಅವು ಬೆಂದಿದೆಯೋ ಇಲ್ಲವೆ ಹಸಿಯಾಗಿವೆಯೋ ಎಂದು ಅವಕ್ಕೆ ಪೆಟ್ಟು ಕೊಟ್ಟು ಆ ಶಬ್ದದಿಂದ ತಿಳಿಯುವಂತೆ, ಇಲ್ಲಿ ನೆರೆದಿರುವವರು ಪಕ್ವತೆ ಸಾಧಿಸಿದ್ದಾರೋ ಇಲ್ಲವೋ ಎಂದು ತಿಳಿದು ಹೇಳು'' ಎನ್ನುತ್ತಾರೆ. ಆಗ ಜ್ಞಾನದೇವರ ಅನುಮತಿ ಪಡೆದ ಗೋರಾ ಪ್ರತಿಯೊಬ್ಬರ ತಲೆಗೆ ಒಂದು ಏಟು ಕೊಟ್ಟು ಶಬ್ದವನ್ನು ಗಮನಿಸತೊಡಗುತ್ತಾನೆ. ಕೊನೆಗೆ, ನಾಮದೇವನ ಹೊರತು ಎಲ್ಲರೂ ಪಕ್ವವಾಗಿದ್ದಾರೆ ಎಂದು ತೀರ್ಪು ನೀಡುತ್ತಾನೆ.

ತನ್ನಂತಹ ವಿಠ್ಠಲನ ಭಕ್ತನನ್ನು ಅಪಕ್ವ ಎಂದುದಕ್ಕಾಗಿ ಸಿಡಿಮಿಡಿಗೊಂಡ ನಾಮದೇವ ವಿಠ್ಠಲನ ಬಳಿಗೆ ಓಡುತ್ತಾನೆ. ಆಗ ವಿಠ್ಠಲನು ಆತನನ್ನು ಸಮಾಧಾನಪಡಿಸುತ್ತ ಪಕ್ವತೆ ಗಳಿಸಲು ಗುರುಗಳ ಬಳಿಗೆ ತೆರಳಲು ಸೂಚಿಸುತ್ತಾನೆ. ಗುರುವಿನ ಶೋಧದಲ್ಲಿ ಹೊರಟ ನಾಮದೇವನಿಗೆ ಮಾರ್ಗದಲ್ಲಿ ಒಬ್ಬ ವೃದ್ಧ ಸಾಧು ದೊರಕುತ್ತಾನೆ. ಆಶ್ಚರ್ಯವೆಂದರೆ ಆ ಸಾಧು ಶಿವಲಿಂಗದ ಮೇಲೆ ಕಾಲಿರಿಸಿ ಮಲಗಿದ್ದ. ಕ್ರೋಧಾವೇಶದಿಂದ ನಾಮದೇವ ಆ ಸಾಧುವನ್ನು ನಿಂದಿಸುತ್ತಾನೆ. ಆಗ ಆ ಸಾಧುವು ''ಎಲ್ಲಿ ಶಿವನಿಲ್ಲವೋ ಅಲ್ಲಿ ನನ್ನ ಕಾಲನ್ನಿರಿಸು'' ಎನ್ನುತ್ತಾನೆ. ನಾಮದೇವ ಎಲ್ಲೆಲ್ಲಿ ಆ ಸಾಧುವಿನ ಕಾಲುಗಳನ್ನು ಇಡಲು ಪ್ರಯತ್ನಿಸುತ್ತಾನೋ, ಅಲ್ಲೆಲ್ಲ ಶಿವಲಿಂಗ ಉದ್ಭವವಾಗಲಾರಂಭಿಸುತ್ತದೆ. ಆಗ ನಾಮದೇವನಿಗೆ ತನ್ನ ತಪ್ಪಿನ ಅರಿವಾಗುತ್ತದೆ. ಆ ಸಾಧುವಿನ ಶಿಷ್ಯತ್ವ ಸ್ವೀಕರಿಸಿ ಜ್ಞಾನ ಪಡೆದು ಹಿಂದಿರುಗುತ್ತಾನೆ.

ಒಮ್ಮೆ ನಾಮದೇವ ರೊಟ್ಟಿ, ಪಲ್ಯ ತಿನ್ನಬೇಕೆಂದಿದ್ದ. ಅಷ್ಟರಲ್ಲಿ ಒಂದು ನಾಯಿ ಬಂದು ಆತನ ಕೈಯಲ್ಲಿನ ರೊಟ್ಟಿಯನ್ನು ಕಸಿದುಕೊಂಡು ಓಡಿಹೋಯಿತು. ಅದನ್ನು ಹಿಂಬಾಲಿಸಿದ ನಾಮದೇವ ಓಡುತ್ತ ಕೂಗಿದ, ''ಹೇ ಪ್ರಭು! ಕೇವಲ ರೊಟ್ಟಿಯನ್ನಷ್ಟೆ ತಿನ್ನಬೇಡ. ಅದರ ಜೊತೆಗೆ ಪಲ್ಯವನ್ನು ತೆಗೆದುಕೊ'' ಎಂದು. ಎಂದರೆ ವಿಠ್ಠಲನನ್ನು ವಿಗ್ರಹದಲ್ಲಿ ಅಷ್ಟೇ ಅಲ್ಲದೆ ಸಕಲ ಜೀವಿಗಳಲ್ಲಿಯೂ ಕಾಣುವ ಸ್ಥಿತಿಗೆ ತಲುಪಿದ್ದಾನೆ ನಾಮದೇವ. ಇದು ನಾಮದೇವನಲ್ಲಿ ಉಂಟಾದ ಪರಿವರ್ತನೆ. ಆತ ದೇಹತ್ಯಾಗ ಮಾಡಿದ್ದು ೩ನೇ ಜುಲೈ ೧೩೫೦ರಂದು. ಆಗ ಆತನಿಗೆ ೮೦ ವರ್ಷ ವಯಸ್ಸು.

ಸಂತ ನಾಮದೇವನ ಸಮಾಧಿಯಿಂದ ಕೆಲವೇ ಅಡಿ ದೂರದಲ್ಲಿ ಮತ್ತೊಂದು ಸಮಾಧಿಯಿದೆ. ಅದು ಭಕ್ತ ಚೋಖಾಮೇಳನ ಸಮಾಧಿ.

### ಚೋಖಾಮೇಳ

ಚೋಖಾಮೇಳ ೧೩೦೦ರ ಆಸುಪಾಸಿನಲ್ಲಿ ಇದ್ದವನು. ಈತ ಮಹಾರ್ ಜನಾಂಗಕ್ಕೆ ಸೇರಿದವನು. ಮಹಾರ್ ಜನಾಂಗದವರು ತಮ್ಮ ಧನಿಯು ಉಳಿಸಿ ಬಿಟ್ಟಿದ್ದನ್ನು ಸೇವಿಸಬೇಕಾಗುತ್ತಿತ್ತು. ಧನಿಯು ಎಂಜಲು ಮಾಡಿ ಬಿಟ್ಟ ಆಹಾರವನ್ನು ಸ್ವೀಕರಿಸಬೇಕಾಗಿತ್ತು. ಧನಿಯ ಮನೆಯವರು ಉಟ್ಟು ಬಿಸಾಡಿದ್ದ ಬಟ್ಟೆಯನ್ನು ಅವರು ಬಳಸಬೇಕಾಗಿತ್ತು. ಇವರೆಲ್ಲ ಊರಾಚೆಯೇ ಇರಬೇಕಾಗಿತ್ತು. ಇವರುಗಳಿಗೆ ದೇವಸ್ಥಾನದ ಒಳಗೂ ಪ್ರವೇಶವಿರಲಿಲ್ಲ. ಚೋಖಾಮೇಳ ಹಾಗೂ ಆತನ ಪತ್ನಿ ಸೋಯರಾಬಾಯಿ ವಿಠ್ಠಲನ ಪರಮ ಭಕ್ತರಾಗಿದ್ದರು. ಅವರು ದೇವಸ್ಥಾನದ ಹೊರಗಿನಿಂದಲೇ ತಮ್ಮ ಪ್ರಾರ್ಥನೆ ಸಲ್ಲಿಸುತ್ತಿದ್ದರು.

ಒಂದು ರಾತ್ರಿ ವಿಠ್ಠಲನು ಚೋಖಾಮೇಳನಿಗೆ ದರ್ಶನವಿತ್ತು, ಆತನ ಕೈಹಿಡಿದುಕೊಂಡು ತನ್ನ ದೇವಸ್ಥಾನಕ್ಕೆ ಕರೆತರುತ್ತಾನೆ. ಗರ್ಭಗೃಹದ ಬಾಗಿಲಿಗೆ ಬೀಗ ಹಾಕಿದ್ದರೂ ಒಳಗಿನಿಂದ ಯಾರೋ ಮಾತನಾಡುತ್ತಿರುವುದನ್ನು ಕೇಳಿಸಿಕೊಂಡು ಅರ್ಚಕರು ಬಾಗಿಲು ತೆರೆದು ನೋಡುತ್ತಾರೆ. ಅಲ್ಲಿ ಚೋಖಾಮೇಳ ನಿಂತಿರುವುದನ್ನು ಕಂಡು ''ದೇವಾಲಯವನ್ನು ಪ್ರವೇಶಿಸಿ ಮೈಲಿಗೆ ಮಾಡಲು ನಿನಗೆಷ್ಟು ಸೊಕ್ಕು'' ಎಂದು ಸಿಟ್ಟಿನಿಂದ ಬೈದು, ಆತನನ್ನು ಚೆನ್ನಾಗಿ ಥಳಿಸುತ್ತಾರೆ.

ಇದಾದ ತರುವಾಯ ಚೋಖಾಮೇಳ ನದಿಯ ಆ ದಡದಲ್ಲಿ ತನ್ನ ಮನೆಯ ಪಕ್ಕದಲ್ಲಿಯೇ ಪುಟ್ಟದಾದ ವಿಠ್ಠಲನ ದೇವಾಲಯವನ್ನು ನಿರ್ಮಿಸಿಕೊಂಡು, ಆತನನ್ನು ಭಕ್ತಿಶ್ರದ್ಧೆಗಳಿಂದ ಪೂಜಿಸಲಾರಂಭಿಸುತ್ತಾನೆ. ಅಲ್ಲಿ ವಿಠ್ಠಲನ ಆವಿರ್ಭಾವದಿಂದಾಗಿ ದೇವಸ್ಥಾನಕ್ಕೆ ಅನೇಕ ಜನ ಬರಲಾರಂಭಿಸುತ್ತಾರೆ. ಒಮ್ಮೆ ಭಕ್ತರಿಗೆ ಪ್ರಸಾದ ಹಂಚುವಾಗ ಅದರ ಕೆಲವು ಕಣಗಳು ವಿಠ್ಠಲನ ಬಟ್ಟೆಯ ಮೇಲೆ ಬಿದ್ದು, ಕಲೆಯುಂಟಾಗುತ್ತದೆ. ಇತ್ತ ಅರ್ಚಕರು ಅಲ್ಲಿಗೆ ಬಂದು ಚೋಖಾಮೇಳನ ಕೆನ್ನೆಗೆ ಬಾರಿಸುತ್ತಾರೆ. ಅರ್ಚಕರು ಪುನಃ ದೇವಸ್ಥಾನಕ್ಕೆ ಹೋದಾಗ ನೋಡುತ್ತಾರೆ, ವಿಠ್ಠಲನ ಮೂರ್ತಿಯ ಮೇಲೆ ಬಾವೆದ್ದಿದೆ. ಅದೂ ಅಲ್ಲದೆ ವಿಠ್ಠಲನ ಬಟ್ಟೆಯ ಮೇಲೆ ಕಲೆಗಳಿವೆ. ತನ್ನ ತಪ್ಪಿನ ಅರಿವಾದ ಅರ್ಚಕರು ಚೋಖಾಮೇಳನಲ್ಲಿ ಕ್ಷಮೆ ಕೇಳುತ್ತಾರೆ.

ಹಲವಾರು ವರ್ಷಗಳ ಬಳಿಕ ಕಟ್ಟಡವೊಂದರ ಕೆಲಸದಲ್ಲಿ ತೊಡಗಿದ್ದಾಗ, ಕಟ್ಟಡ ಕುಸಿದು ಚೋಖಾಮೇಳಾ ಸಾವನ್ನಪ್ಪುತ್ತಾನೆ.

ನಾಮದೇವರು ಆ ಕಟ್ಟಡ ಕುಸಿದ ಸ್ಥಳಕ್ಕೆ ತೆರಳಿ, ಯಾವ ಮೂಳೆಗಳಿಂದ 'ವಿಠ್ಠಲ, ವಿಠ್ಠಲ' ಎಂಬ ಶಬ್ದ ಉಂಟಾಗುತ್ತಿದೆಯೋ ಅವುಗಳನ್ನೆಲ್ಲಾ ಶೇಖರಿಸಿ ತರುತ್ತಾರೆ. ಅವೇ ಚೋಖಾಮೇಳನ ಮೂಳೆಗಳು. ತದನಂತರ ದೇವಸ್ಥಾನದ ಎದುರಿನಲ್ಲೇ ಅದರ ಸಮಾಧಿ ಮಾಡುತ್ತಾರೆ. ದೇವಾಲಯದ ಮುಂಭಾಗದಲ್ಲಿ, ಎಲ್ಲಿ ನಿಂತುಕೊಂಡು ಚೋಖಾಮೇಳ ಹಾಗೂ ಆತನ ಪರಿವಾರದವರು ಕೀರ್ತನೆ ಮಾಡುತ್ತಿದ್ದರೋ, ಅಲ್ಲಿಯೇ ಆ ಸಮಾಧಿ ಇದೆ. ಇದಕ್ಕೆ ಈಗಲೂ ಒಬ್ಬ ಮಹಾರ್ ಜನಾಂಗದ ಸದಸ್ಯರು ಪೂಜೆ ಸಲ್ಲಿಸುತ್ತಾರೆ.

ದೇವಸ್ಥಾನದ ಪ್ರಾಂಗಣದಲ್ಲಿ ಒಂದು ಅಪರೂಪದ ವೃಕ್ಷವನ್ನು ನೋಡಬಹುದು. ಈ ವೃಕ್ಷಕ್ಕೂ ಒಂದು ಐತಿಹ್ಯವಿದೆ. ಇದು ಓರ್ವ ಮಹಾನ್ ಭಕ್ತೆ ಕಾನ್ಹೋಪಾತ್ರಾಳ ಸಮಾಧಿಯಿಂದ ಒಡಮೂಡಿದೆ.

## ಕಾನ್ಹೋಪಾತ್ರಾ

೧೫ನೇ ಶತಮಾನದಲ್ಲಿ ಪಂಢರಾಪುರದಿಂದ ೧೫ಮೈಲಿ ದೂರವಿರುವ ಮಂಗಲ್ವೇಡಾ ಎಂಬ ಗ್ರಾಮದಲ್ಲಿ ಜನಿಸಿದವಳು ಖಾನ್ಹೋಪಾತ್ರಾ. ಈಕೆ ಓರ್ವ ನರ್ತಕಿಯ ಮಗಳು. ತಾಯಿಯಿಂದ ಸಂಗೀತ ಹಾಗೂ ನೃತ್ಯ ಕಲಿತಳು. ಅತ್ಯಂತ ಸುಂದರಿಯಾದ ಕಾನ್ಹೋಪಾತ್ರಾ ಯಾರಾದರೊಬ್ಬ ಧನಿಕನ ಮನವೊಲಿಸಿ ಬಹಳಷ್ಟು ಹಣ ಸಂಪಾದಿಸಬಹುದು ಎಂದು ಆಕೆಯ ತಾಯಿ ಭಾವಿಸುತ್ತಾಳೆ. ಆದರೆ ತನಗಿಂತಲೂ ಸಾವಿರಪಟ್ಟು ಸೌಂದರ್ಯವಂತ ಯುವಕನನ್ನೇ ಮದುವೆಯಾಗುವುದಾಗಿ ಕಾನ್ಹೋಪಾತ್ರ ನಿರ್ಧರಿಸುತ್ತಾಳೆ.

ಒಂದು ದಿನ ವಾರಕರಿ ಗುಂಪಿನವರು ವಿಠ್ಠಲನ ದರ್ಶನಕ್ಕಾಗಿ ದಾರಿಯುದ್ದಕ್ಕೂ ವಿಠ್ಠಲನ ನಾಮ-ಗುಣ-ಕೀರ್ತನೆ ಮಾಡುತ್ತ, ಆತನನ್ನು ಕೊಂಡಾಡುತ್ತಾ, ಅತ್ಯಂತ ಆನಂದದಿಂದ ನರ್ತನ ಮಾಡುತ್ತ ಮಂಗಲ್ವೇಡಾದ ಮೂಲಕ ಸಾಗುತ್ತಿರುತ್ತಾರೆ. ಆಗ ಕಾನ್ಹೋಪಾತ್ರಾ ವಿಠ್ಠಲನ ವೈಭವವನ್ನು ಬಣ್ಣಿಸಬೇಕೆಂದು ಅವರಲ್ಲಿ ವಿನಂತಿಸಿಕೊಳ್ಳುತ್ತಾಳೆ. ''ಬ್ರಹ್ಮದೇವರೇ ಯಾರ ವೈಭವವನ್ನು ಬಣ್ಣಿಸಲು ಸಾಧ್ಯವಿಲ್ಲವೋ ಅಂಥವರನ್ನು ನಾವು ಹೇಗೆ ತಾನೆ ಬಣ್ಣಿಸಬಲ್ಲೆವು? ಆತ ಲಕ್ಷ್ಮೀದೇವಿಗಿಂತ ಕೋಟಿಪಾಲು ಸುಂದರನು. ಆತನ ದೃಷ್ಟಿಯೇ ಸೂರ್ಯ-ಚಂದ್ರಾದಿಗಳು'' ಎಂಬಿತ್ಯಾದಿಯಾಗಿ ವಾರಕರಿಯವರು ವಿಠ್ಠಲನನ್ನು ಬಣ್ಣಿಸುತ್ತಾರೆ. ವಿಠ್ಠಲನ ಬಣ್ಣನೆಯಿಂದ ಮನಸೋತ ಕಾನ್ಹೋಪಾತ್ರಾ ವಾರಕರಿ ಗುಂಪಿನೊಂದಿಗೆ ಪಂಢರಾಪುರಕ್ಕೆ ತಲುಪುತ್ತಾಳೆ. ವಿಠ್ಠಲನ ಮಂದಿರದಲ್ಲಿ ಸಂತೋಷದಿಂದ ನರ್ತಿಸುತ್ತ ಕಾಲಕಳೆಯಲಾರಂಭಿಸುತ್ತಾಳೆ. ''ತಾನು ಜನಿಸಿದ್ದು ವಿಠ್ಠಲನಿಗಾಗಿ, ತನ್ನ ದೇಹ ಮನ ಪ್ರಾಣಗಳು ವಿಠ್ಠಲನಿಗಾಗಿ, ವಿಠ್ಠಲನೇ ತನ್ನ ಸರ್ವಸ್ವ ಹಾಗೂ ಆತನೇ ಕೃಪೆ ಮಾಡಿ ತನ್ನನ್ನು ಇಲ್ಲಿಗೆ ಕರೆಸಿಕೊಂಡಿದ್ದಾನೆ'' ಎಂದಾಕೆಗೆ ದೃಢ ವಿಶ್ವಾಸವುಂಟಾಗಲಾರಂಭಿಸುತ್ತದೆ.

ಆಕೆಯ ಸೌಂದರ್ಯವನ್ನು ಕೆಲವು ದುರುಳರು ಓರ್ವ ಮುಸ್ಲಿಂ ರಾಜನಿಗೆ ಬಣ್ಣಿಸುತ್ತಾರೆ. ಇದರಿಂದ ಮೋಹಿತನಾದ ಆ ರಾಜನು ಕಾನ್ಹೋಪಾತ್ರಾಳನ್ನು ಬಲವಂತವಾಗಿಯಾದರೂ ಸರಿಯೆ, ಕರೆತರುವಂತೆ ತನ್ನ ಸೈನಿಕರಿಗೆ ಆದೇಶಿಸುತ್ತಾನೆ. ಸೈನಿಕರು ಪಂಢರಾಪುರಕ್ಕೆ ತಲುಪಿ ರಾಜನ ಆಜ್ಞೆಯನ್ನು ತಿಳಿಯಪಡಿಸುತ್ತಾರೆ. ವಿಠ್ಠಲನನ್ನು ಅಗಲಲು ಇಚ್ಛೆಯಿಲ್ಲದ ಕಾನ್ಹೋಪಾತ್ರಾ ತನಗೆ ಒದಗಿದ ಸಂಕಟವನ್ನು ಕಂಡು ದುಃಖಿಸುತ್ತಾಳೆ. ಆದರೆ ಆಕೆಗೆ ಬೇರೆ ಮಾರ್ಗ ವಿರುವುದಿಲ್ಲ. ವಿಠ್ಠಲನಿಗೆ ಒಂದು ಮಾತು ಹೇಳಿ ಬರುವುದಾಗಿ ಸೈನಿಕರಿಗೆ ತಿಳಿಸಿದ ಕಾನ್ಹೋಪಾತ್ರಾ ಮಂದಿರದ ಒಳಗೆ ಹೋಗುತ್ತಾಳೆ.

''ನಿನ್ನಲ್ಲಿ ಶರಣಾಗತಳಾದ ನನ್ನನ್ನು ಆ ಪಾಪಿ ತನ್ನ ವಶಕ್ಕೆ ತೆಗೆದುಕೊಂಡಲ್ಲಿ ನಿನ್ನ ಮರ್ಯಾದೆಗೇ ಕುಂದುಂಟಾಗುತ್ತದೆ. ಆಗ ನಿನ್ನನ್ನು ಕಂಡು ಜನ ಗೇಲಿ ಮಾಡುತ್ತಾರೆ. ಆದ್ದರಿಂದ ಹಾಗಾಗದಂತೆ ಮಾಡು. ನನ್ನನ್ನು ನಿನ್ನಲ್ಲಿ ಐಕ್ಯಳನ್ನಾಗಿಸಿಕೋ'' ಎಂದು ಕಣ್ಣೀರ್ಗರೆದು ವಿಠ್ಠಲನಲ್ಲಿ ಪ್ರಾರ್ಥಿಸಲಾರಂಭಿಸುತ್ತಾಳೆ. ತನ್ನ ಭಕ್ತೆಯ ನಿಷ್ಠೆಯಿಂದ ಸಂಪ್ರೀತನಾದ ವಿಠ್ಠಲನು ಆಕೆಯ ಪ್ರಾಣವನ್ನು ಸ್ವೀಕರಿಸಿ, ಆಕೆಯನ್ನು ಧನ್ಯಳನ್ನಾಗಿಸುತ್ತಾನೆ.

ಕಾನ್ಹೋಪಾತ್ರಾಳ ಶವವನ್ನು ದೇವಸ್ಥಾನದ ಪ್ರಾಂಗಣದಲ್ಲಿಯೇ ಮಣ್ಣು ಮಾಡಲಾಗುತ್ತದೆ. ಕೆಲವಾರು ದಿನಗಳ ನಂತರ ಆ ಸ್ಥಳದಲ್ಲಿ ಒಂದು ಸುಗಂಧಭರಿತ ವೃಕ್ಷ ಹೊರಹೊಮ್ಮುತ್ತದೆ. ಆ ವೃಕ್ಷವನ್ನು ಈಗಲೂ ನೋಡಬಹುದಾಗಿದೆ.

## ವಿಷ್ಣುಪಾದ

ಪಂಢರಾಪುರದಿಂದ ಸುಮಾರು ೪-೫ ಕಿ.ಮೀ. ದೂರದಲ್ಲಿ ಇರುವ ಸ್ಥಳ ವಿಷ್ಣುಪಾದ. ಇಲ್ಲಿ ಒಂದು ಶಿಲೆಯ ಮೇಲೆ ವಿಷ್ಣುವಿನ ಪಾದಗಳ ಚಿಹ್ನೆಯಿದೆ. ಆದ್ದರಿಂದಲೇ ಇದಕ್ಕೆ ಈ ಹೆಸರು ಬಂದಿದೆ. ಮಾರ್ಗಶೀರ್ಷ ಮಾಸದಲ್ಲಿ ಇಲ್ಲಿ ಬಹಳ ವಿಜೃಂಭಣೆಯಿಂದ ಉತ್ಸವವನ್ನು ಆಚರಿಸಲಾಗುತ್ತದೆ. ಈ ಸ್ಥಳದ ಸಮೀಪದಲ್ಲಿಯೇ ಒಂದು ದೇವಸ್ಥಾನವಿದೆ. ಇದು ಸತಿ ಸಕ್ಕೂಬಾಯಿಯ ಮಂದಿರ. ಇಲ್ಲಿ ಸಕ್ಕೂಬಾಯಿ ಭಕ್ತಿಯಿಂದ ಪಾಂಡುರಂಗನಿಗೆ ಮೊಸರನ್ನು ಕಡೆದು ಬೆಣ್ಣೆ ತೆಗೆದು ಅರ್ಪಿಸುತ್ತಿದ್ದ ಕೊಡ, ಸಕ್ಕೂಬಾಯಿ ತನ್ನ ಸ್ವಹಸ್ತದಿಂದ ತೊಳೆದ ಮಣ್ಣಿನ ಪಾತ್ರೆಗಳು ಹಾಗೂ ಆಕೆ ಉಪಯೋಗಿಸುತ್ತಿದ್ದ ಧಾನ್ಯ ಬೀಸುವ ಕಲ್ಲುಗಳನ್ನು ಕಾಣಬಹುದಾಗಿದೆ. ವಿಠ್ಠಲನೇ ಗೃಹಿಣಿಯಾಗಿ ಮನೆಗೆಲಸ ಮಾಡುವಂತೆ ಮಾಡಿದ ಭಕ್ತೆ ಸಕ್ಕೂಬಾಯಿ.

## ಸತಿ ಸಕ್ಕೂಬಾಯಿ

ಚಿಕ್ಕಂದಿನಿಂದಲೇ ಸಕ್ಕೂಬಾಯಿ ವಿಠ್ಠಲನ ಪರಮ ಭಕ್ತೆಯಾಗಿದ್ದಳು. ಆದರೆ ಮದುವೆಯಾಗಿ ಹೋದ ಗಂಡನ ಮನೆಯಲ್ಲಿನ ವಾತಾವರಣ ಅಧ್ಯಾತ್ಮಕ್ಕೆ ಪೂರಕವಾಗಿರಲಿಲ್ಲ. ಆಕೆಯ ಗಂಡನ ಮನೆಯ ಸದಸ್ಯರು ಆಕೆಯನ್ನು ವಿಧವಿಧವಾಗಿ ಹಿಂಸಿಸಿ ವಿಕೃತ ಆನಂದದಲ್ಲಿ ತೊಡಗಿದ್ದರು. ಇಷ್ಟೆಲ್ಲ ಕಷ್ಟವಿದ್ದರೂ ಆಕೆ ಮಾತ್ರ ತಂದೆ ವಿಠ್ಠಲ ಹಾಗೂ ತಾಯಿ ರುಕ್ಮಿಣಿಯ ಹೊರತಾಗಿ ಇನ್ನಾರಲ್ಲಿಯೂ ತನ್ನ ತೊಂದರೆ ಹೇಳಿಕೊಳ್ಳುತ್ತಿರಲಿಲ್ಲ.

ಪಂಢರಾಪುರದಲ್ಲಿ ಜರುಗುವ ಬ್ರಹ್ಮೋತ್ಸವ ನೋಡಬೇಕೆಂಬುದು ಆಕೆಯ ಬಹುದಿನದ ಹಂಬಲವಾಗಿತ್ತು. ವಾರಕರಿಗೆ

ತೆರಳುವ ಯಾತ್ರಿಕರೊಂದಿಗೆ ಪ್ರಯಾಣ ಮಾಡಬೇಕೆಂದು ಆಕೆ ಬಯಸಿದ್ದಳು. ಈ ವಿಷಯ ತಿಳಿದ ಆಕೆಯ ಅತ್ತೆ ಆಕೆಯನ್ನು ಬಹುವಾಗಿ ದಂಡಿಸಿ ಮನೆಯಲ್ಲಿ ಬಂಧಿಸಿಡುತ್ತಾಳೆ. ಆ ರಾತ್ರಿ ವಿಠ್ಠಲನು ತನ್ನ ಯೋಗಮಾಯೆಯಿಂದ ಸಕ್ಕೂಬಾಯಿಯು ಮನೆಯಿಂದ ಪಂಢರಾಪುರಕ್ಕೆ ಹೊರಡುವಂತೆ ಮಾಡುತ್ತಾನೆ. ತಾನು ಸ್ವತಃ ಸಕ್ಕೂಬಾಯಿಯಾಗಿ ಮನೆಗೆಲಸ ಮಾಡಲು ಪ್ರಾರಂಭಿಸುತ್ತಾನೆ. ಕಾಲಕ್ರಮದಲ್ಲಿ ಸಕ್ಕೂಬಾಯಿಯ ರೂಪದಲ್ಲಿದ್ದ ವಿಠ್ಠಲ ಮನೆಯ ಸದಸ್ಯರಲ್ಲಿ ಪರಿವರ್ತನೆ ಉಂಟುಮಾಡುತ್ತಾನೆ.

ಇತ್ತ ಪಂಢರಾಪುರಕ್ಕೆ ತಲುಪಿದ ಸಕ್ಕೂಬಾಯಿ ವಿಠ್ಠಲನನ್ನು ಬಿಟ್ಟು ಅಗಲಲಾರದೆ ಆತನಲ್ಲಿ ಐಕ್ಯಳಾಗುತ್ತಾಳೆ. ಆಗ ರುಕ್ಮಿಣಿ ದೇವಿಯು ಪರಶಿವನ ನೆರವು ಪಡೆದು ಸಕ್ಕೂಬಾಯಿಗೆ ಪುನಃ ಜೀವದಾನ ಮಾಡಿಸಿ, ಆಕೆಯನ್ನು ಮನೆಗೆ ತಲುಪಿಸುತ್ತಾಳೆ. ನಿಜವಾದ ಸಕ್ಕೂಬಾಯಿ ಮನೆಗೆ ತಲುಪಿದಾಗಲೇ ಎಲ್ಲರಿಗೂ ತಿಳಿಯುವುದು ಇಷ್ಟು ದಿವಸ ತಮ್ಮೊಂದಿಗಿದ್ದು ಗೃಹಕೃತ್ಯ ಮಾಡಿಕೊಂಡು ಹೋಗುತ್ತಿದ್ದುದು ವಿಠ್ಠಲನಲ್ಲದೇ ಬೇರಲ್ಲ ಎಂದು. ಇಂತಹ ಮಹಾನ್ ಭಕ್ತೆ ಸತಿ ಸಕ್ಕೂಬಾಯಿ.

### ಉಪಸಂಹಾರ

ಇಂತಹ ಹಲವಾರು ಸಂತರುಗಳು ಭಗವಂತನೊಂದಿಗೆ ಆತ್ಮೀಯ ಸಂಬಂಧ ಹೊಂದಿ ನಲಿದಾಡಿದ ಕ್ಷೇತ್ರ ಈ ಪಂಢರಾಪುರ. ಭಕ್ತರೊಂದಿಗೆ ಮನೆಮಗನಂತೆ, ಪ್ರೇಮಪೂರ್ಣ ತಂದೆಯಂತೆ, ವಾತ್ಸಲ್ಯಮಯಿ ತಾಯಿಯಂತೆ ವಿಠ್ಠಲನು ಲೀಲೆಯಾಡಿದ ಕ್ಷೇತ್ರ ಈ ಪಂಢರಾಪುರ. ಮನುಕುಲದ ಇತಿಹಾಸದಲ್ಲಿ ಇಷ್ಟೆಲ್ಲ ಸಂತರು ಏಕಕಾಲದಲ್ಲಿ, ಒಂದೇ ಸ್ಥಳದಲ್ಲಿ ಇದ್ದ ಉಲ್ಲೇಖ ಪ್ರಾಯಶಃ ಎಲ್ಲಿಯೂ ಇದ್ದಂತೆ ಕಂಡುಬರುವುದಿಲ್ಲ.

ಶ್ರೀರಾಮಕೃಷ್ಣರು ಹೇಳುತ್ತಾರೆ, ''ಹಸು ಹೊಟ್ಟೆ ತುಂಬ ಹುಲ್ಲು ಮೇಯ್ದು ಬಳಿಕ ಒಂದೆಡೆ ನಿಶ್ಚಿಂತೆಯಿಂದ ಮಲಗಿಕೊಳ್ಳುತ್ತದೆ ಮತ್ತು ಆ ಮೇವನ್ನು ಪುನಃ ಬಾಯಿಗೆ ತಂದುಕೊಂಡು ಚೆನ್ನಾಗಿ ಮೆಲುಕು ಹಾಕುತ್ತಾ ಆಸ್ವಾದಿಸುತ್ತದೆ. ಹಾಗೆಯೇ ನಾವೂ ಕೂಡ ದೇವಾಲಯಗಳನ್ನೂ ತೀರ್ಥಕ್ಷೇತ್ರಗಳನ್ನೂ ಕಂಡಾಗ ನಮ್ಮ ಮನದಲ್ಲಿ ಮೂಡುವ ಪವಿತ್ರ ಭಾವನೆಗಳನ್ನೆಲ್ಲ, ಅಲ್ಲಿಂದ ಮರಳಿದ ಮೇಲೆ, ಮತ್ತೊಮ್ಮೆ ಏಕಾಂತದಲ್ಲಿ ಕುಳಿತು ಮೆಲುಕು ಹಾಕಬೇಕು. ಅವುಗಳಲ್ಲೇ ಮಗ್ನವಾಗಬೇಕು. ಹೀಗೆ ಮಾಡುವುದರಿಂದ ಮಾತ್ರ ತೀರ್ಥಕ್ಷೇತ್ರದ ಮಹಿಮೆ ನಮ್ಮ ಮನದ ಮೇಲೆ ಸ್ಥಿರವಾದ ಪರಿಣಾಮವನ್ನುಂಟುಮಾಡಬಲ್ಲುದು'' ಎಂದು.

ಈ ಮಾತಿನಂತೆ, ಅಕ್ಟೋಬರ್ ೨೦೨೨ರಂದು ಪಂಢರಾಪುರ ಕ್ಷೇತ್ರಕ್ಕೆ ಭೇಟಿ ನೀಡಲು ನಮಗೆ ಸಾಧ್ಯವಾಯಿತು. ವಿಠ್ಠಲನಾಗಿ ಪಂಢರಾಪುರದಲ್ಲಿ ನೆಲೆಸಿರುವ ಭಗವಾನ್ ಶ್ರೀರಾಮಕೃಷ್ಣರಿಗೆ ಮನದಲ್ಲಿಯೇ ನಮಿಸುತ್ತ ವಿರಮಿಸುತ್ತೇನೆ. ✽

HOTEL SHARADA




website: www.hotelsharada.com,
E-mail : hotelsharada@gmail.com

Ph: +91-080-2220 1042, + 91-080-2220 1044

1. Opposite: Bangalore City Railway Station
2. Opposite : Kempegowda Bus - Station (KBS)
3. Opposite : Majestic Metro Interchange Station

# 25/3, Kempegowda Circle,Bangalore - 560 009,
Near Upparpet Police Station